ಉಂಟಾಗಿದೆ. ಸರ್ಕಾರ ಕೂಡಲೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿ, ನನ್ನ ಕ್ಷೇತ್ರವನ್ನು ಬರಗಾಲ ಪ್ರದೇಶವೆಂದು ಘೋಷಿಸಬೇಕು ಮತ್ತು ದನಗರುಗಳಿಗೆ ನೀರು ಮತ್ತು ಹುಲ್ಲಿನ ವ್ಯವಸ್ಥೆ, ರೈತರಿಗೆ ನೀರು ರಿಲೀಫ್ ಕೆಲಸವನ್ನು ಒದಗಿಸಿ ಕೊಡಬೇಕು. ಕಂದಾಯವನ್ನು ವಜಾ ಮಾಡಬೇಕು ಮತ್ತು ಸಾಲವನ್ನು ಕಟ್ಟಲು ರೈತರಿಗೆ ಕಾಲಾವಕಾಶ ಮಾಡಿ ಕೊಡಬೇಕಾಗಿ ಮುಖ್ಯ ಮಂತ್ರಿಗಳನ್ನು ಮತ್ತು ಕಂದಾಯ ಮಂತ್ರಿಗಳನ್ನು ಅಧ್ಯಕ್ಷರ ಮೂಲಕ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಅರಸೀಕೆರೆ ಮೊದಲಾದ ಭಾಗಗಳಲ್ಲಿ, ಇಲ್ಲಿಯವರೆಗೆ ಮಳೆ ಆಗಿರಲಿಲ್ಲ. ಈಗ ಸ್ವಲ್ಪ ಮಳೆಯಾಗಿದೆ. ಆದರೂ ಸಹ ಅಭಾವ ಇರುವುದು ನಿಜ, ಬರಗಾಲ ಪ್ರದೇಶ ಎಂದು ಡಿಕ್ಲೇರ್ ಮಾಡುವ ಅವಶ್ಯಕತೆ ಇಲ್ಲ, ಆದರೆ ಎಲ್ಲೆಲ್ಲಿ ಅಭಾವವಾಗಿದೆ, ಅಲ್ಲಿ ಯೋಗ್ಯವಾದಂಥ ಕಾಮಗಾರಿಗಳನ್ನು ಮಾಡಬೇಕೆಂದು ಈಗಾಗಲೇ ಜಿಲ್ಲಾಪರಿತ್‌ಗೆ ತಿಳಿಸಿದ್ದೇವೆ ಮತ್ತು ಜಿಲ್ಲಾಧಿಕಾರಿಗಳಿಗೂ ಆದೇಶ ಕೊಟ್ಟಿದ್ದೇನೆ. ಮಾನ್ಯ ಸದಸ್ಯರ ಕಳಕಳಿಯನ್ನು ಅನುಲಕ್ಷಿಸಿ ಯಾವ ಕಾರ್ಯಕ್ರಮ ಸಾಧ್ಯವೋ ಅದನ್ನು ಸರ್ಕಾರ ತೆಗೆದು ಕೊಳ್ಳುವುದು.

II ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಆರೋಗ್ಯ ಕೇಂದ್ರಗಳ ದುರಸ್ತಿ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಆರೋಗ್ಯ ಕೇಂದ್ರಗಳು ನಾಡುರಸ್ತೆಯಲ್ಲಿದ್ದು ಕಿಟಕಿ ಬಾಗಿಲುಗಳು ಇಲ್ಲದೇ, ವಿದ್ಯುತ್ ವೈರ್‌ಗಳು ನೇತಾಡುತ್ತಿದ್ದು, ಈ ಬಗ್ಗೆ ಜಿಲ್ಲಾ ಪರಿಷತ್ ಸಭೆಯಲ್ಲಿ ಕೇಳಿದಾಗ ಸರಕಾರದಿಂದ ಹೆಚ್ಚಿನ ಅನುದಾನ ಬಂದಾಗ ಮಾಡಿಲಾಗುವುದು ಎಂದು ತಿಳಿಸಿರುತ್ತಾರೆ. ಆದ್ದರಿಂದ ಆಧ್ಯತೆಯ ಮೇಲೆ ತುರ್ತು ರಿಪೇರಿ ಮತ್ತು ಸುಧಾರಣೆಗಾಗಿ (ಮೈನ್‌ಟಿನೆನ್ಸ್) ಅನುದಾನ ಬಿಡುಗಡೆ ಮಾಡುವಂತೆ ಈ ಮೂಲಕ ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಸಚಿವೆಯವರು).— ಮಾನ್ಯ ಅಧ್ಯಕ್ಷರೆ, ೧೯೯೦-೯೧ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಆಯವ್ಯಯದ ಯೋಜನಾ ಶೀರ್ಷಿಕೆಯಡಿಯಲ್ಲಿ ೧೦೫.೦೨ ಲಕ್ಷ ರೂಪಾಯಿಗಳನ್ನು ಮತ್ತು ಯೋಜನೇತರ ಲೆಕ್ಕ ಶೀರ್ಷಿಕೆಯಲ್ಲಿ ೪೧೮.೦೪ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದನ್ನು ಉಪಯೋಗಿಸಿಕೊಂಡು ದಕ್ಷಿಣ ಕನ್ನಡ ಜಿಲ್ಲಾಪರಿಷತ್ತ್‌ನವರೇ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ, ಹಾಗೂ ಸುಧಾರಣೆ ಮಾಡಬೇಕಾಗುತ್ತದೆ. ಅದಾಗ್ಯೂ ಆದ್ಯತೆಯ ಮೇಲೆ ಸುಧಾರಣಾ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರದ ಪತಿಯಿಂದಲೂ ಸೂಚಿಸಲಾಗುವುದು.

III. ಬಿಜಾಪುರ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಉಪನಿರ್ದೇಶಕರಾಗಿರುವ ಶ್ರೀ ಕಮದಾಳ ಇವರ ದುರ್ನಡತೆ ಬಗ್ಗೆ

ಡಾ. ಆರ್. ಬಿ. ತಾಳಿ.— ಮಾನ್ಯ ಅಧ್ಯಕ್ಷರೇ, ತಾರೀಖು ೩೦-೬-೯೦ ರಂದು ಜರುಗಿದ ಬಿಜಾಪುರ ಜಿಲ್ಲಾ ಪರಿಷತ್ ಸಭೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಶ್ರೀ ಕಮದಾಳ ಇವರ ದುರ್ನಡತೆಯ ಬಗ್ಗೆ ಗಂಭೀರವಾಗಿ ಚರ್ಚೆ ನಡೆದು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಆಗ್ರಹಿಸುವ ತೀರಾವು ಸರ್ವಾನುಮತದಿಂದ ಅಂಗೀಕಾರವಾಗಿದೆ.

ಸದರಿ ಅಧಿಕಾರಿಯು ಸಾರ್ವಜನಿಕರ ಜೊತೆಗೆ, ಶಾಸಕರ ಜೊತೆಗೆ, ಅಸಭ್ಯವಾಗಿ, ಅನಾಗರಿಕವಾಗಿ ನಡೆದುಕೊಳ್ಳುವುದು ಸರ್ವೇ ಸಾಮಾನ್ಯವಾಗಿದೆ. ಇದಲ್ಲದೆ ಅಧಿಕಾರಿಯು ಅತೀ ಭ್ರಷ್ಟರಿದ್ದು ನೇಮಕಾತಿಯಲ್ಲಿ ಹಾಗೂ ವರ್ಗಾವಣೆಯಲ್ಲಿ ಅಧಿಕ ಹಣ ಸಂಪಾದನೆ ಮಾಡಿದ್ದಾನೆ. ತಪ್ಪು ಅವಗಾಹನೆಗಾಗಿ ೧-೭-೯೦ರ ಸಂಯುಕ್ತ ಕರ್ನಾಟಕ ಪತ್ರಿಕೆಯ ಕಟಿಂಗ್ ಅನ್ನು ಲಗತ್ತಿಸಿದ್ದೇವೆ. ಇಂತಹ ಅಧಿಕಾರಿಯನ್ನು ಕೂಡಲೇ ಸಸ್ಪೆಂಡ್ ಮಾಡಿ ಅವನ ವಿರುದ್ಧ ಯೋಗ್ಯ ಚೌಕಸಿ ಮಾಡಬೇಕೆಂದು ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತ್ರಿಸುವೆ.

ಶ್ರೀ ಕೆ.ಹೆಚ್. ರಂಗನಾಥ್ (ವಿದ್ಯಾಸಚಿವರು).— ಮಾನ್ಯ ಅಧ್ಯಕ್ಷರೇ, ಶ್ರೀ ಸಂಗಪ್ಪ ಕಮದಾಳ್ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ. ಇವರ ಮೇಲೆ ಶಾಸಕರಾದ

ಶ್ರೀ ಆರ್. ಬಿ. ಚೌಧರಿ, ಅವರು ತಮ್ಮ ದಿನಾಂಕ ೧೨-೬-೧೯೯೦ರ ಪತ್ರದಲ್ಲಿ ಕೆಲವು ಆರೋಪಗಳನ್ನು ಹೊರಿಸಿ ಪತ್ರ ಬರೆದಿದ್ದಾರೆ. ಈ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು ಇವರನ್ನು ನೇಮಕ ಮಾಡಿದ್ದು, ಅವರಿಂದ ವಿಚಾರಣಾ ವರದಿ ಬಂದ ಕೂಡಲೇ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

IV. ತಿಪಟೂರು ತಾಲ್ಲೂಕಿನಲ್ಲಿ ತೆಂಗಿನ ಬೆಳೆ ಕಪ್ಪುತಲೆ ಹುಳಗಳ ರೋಗದಿಂದ ನಾಶವಾಗುತ್ತಿರುವುದು

ಶ್ರೀ ಟಿ. ಎಂ. ಮಂಜುನಾಥ್.— ತಿಪಟೂರು ತಾಲ್ಲೂಕಿನಲ್ಲಿ ತೆಂಗಿನ ಬೆಳೆಗೆ ಕಪ್ಪುತಲೆ ಹುಳುಗಳ ರೋಗದಿಂದ ತೆಂಗಿನ ಮರಗಳು ನಾಶವಾಗುತ್ತಿರುವ ಬಗ್ಗೆ ಸರಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾನ್ಯ ವ್ಯವಸಾಯ ಮತ್ತು ತೋಟಗಾರಿಕಾ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಸದಸ್ಯರು ಎತ್ತಿದಂತಹ ಪ್ರಶ್ನೆಯನ್ನು ವ್ಯವಸಾಯ ಮತ್ತು ತೋಟಗಾರಿಕೆ ಮಂತ್ರಿಗಳ ಗಮನಕ್ಕೆ ತರಲಾಗುವುದು. ಅವರಿಗೆ ಉತ್ತರವನ್ನು ಒದಗಿಸಲಾಗುವುದು.

V. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ಕಲ್ಲಡ್ಕ ಪೇಟೆಯನ್ನು ಹಾದು ಪುತ್ತೂರಿಗೆ ಹೋಗುವ ಬಸ್ಸುಗಳಿಗೆ ಕಲ್ಲಡ್ಕನಲ್ಲಿ ಸ್ಟಾಂಪ್ ಕೊಡಲು ಒತ್ತಾಯ

ಶ್ರೀ ಎ. ರುಕ್ಮಯ್ಯ ಪೂಜಾರಿ.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನನಿತ್ಯ ಮಂಗಳೂರಿನಿಂದ ಕಲ್ಲಡ್ಕ ಪೇಟೆಯನ್ನು ಹಾದು ಪುತ್ತೂರಿಗೆ ಹಲವಾರು ನಾನ್-ಸ್ಟಾಪ್ ಬಸ್ಸುಗಳು ಮತ್ತು ಎಕ್ಸ್‌ಪ್ರೆಸ್ ಬಸ್ಸುಗಳು ಹಾಗೆಯೇ ಬೇರೆ ಊರುಗಳಿಗೆ ಕೂಡಾ ಎಕ್ಸ್‌ಪ್ರೆಸ್ ಬಸ್ಸುಗಳು ಓಡುತ್ತಿರುತ್ತದೆ. ಇಂತಹ ಹಲವಾರು ಸಂದರ್ಭಗಳಲ್ಲಿ ಬಸ್ಸುಗಳಲ್ಲಿ ಸರ್ವೇ ಸಾಮಾನ್ಯವಾಗಿ ಬೇಕಾದಷ್ಟು ಪ್ರಯಾಣಿಕರಿರುವುದಿಲ್ಲ. ಕಲ್ಲಡ್ಕವು ಹಲವಾರು ಗ್ರಾಮಗಳಿಗೆ ಕೇಂದ್ರವಾಗಿರುವುದರಿಂದ ದಿನನಿತ್ಯ ತುಂಬಾ ಜನ ಪ್ರಯಾಣಿಕರು ಕಲ್ಲಡ್ಕಕ್ಕೆ ಬಂದು ಬೇರೆ ಬೇರೆ ಊರುಗಳಿಗೆ ಪ್ರಯಾಣಿಸ ಬೇಕಾಗುವುದರಿಂದ ಇಂತಹ ನಾನ-ಸ್ಟಾಪ್ ಮತ್ತು ಎಕ್ಸ್‌ಪ್ರೆಸ್ ಬಸ್ಸುಗಳಿಗೆ (ಸುವಿಹಾರಿ ಅಲ್ಲದ) ಕಲ್ಲಡ್ಕದಲ್ಲಿ ಸ್ಟಾಪ್ ಕೊಟ್ಟರೆ ಸರಕಾರಕ್ಕೆ ಆದಾಯ ಹೆಚ್ಚುವುದು ಮಾತ್ರವಲ್ಲ ನೂರಾರು ಪ್ರಯಾಣಿಕರಿಗೆ ಅನುಕೂಲವಾಗುವುದು. ಇದು ಬಹುಜನರ ಬಹು ದಿನದ ಬೇಡಿಕೆ ಕೂಡಾ ಆಗಿರುತ್ತದೆ. ಆದ್ದರಿಂದ ಇಂತಹ ಬಸ್ಸುಗಳಿಗೆ ಕಲ್ಲಡ್ಕದಲ್ಲಿ ಸ್ಟಾಪ್ ಕೊಡುವಂತೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಮಂಗಳೂರು-ಪುತ್ತೂರು ನಡುವೆ ಸಂಚರಿಸುತ್ತಿರುವ ಅತೀ ವೇಗಧೂತ ಸಾರಿಗೆಗಳಿಗೆ ಕಲ್ಲಡ್ಕದಲ್ಲಿ ನಿಲುಗಡೆ ನೀಡಿದೆ. ನಿಗಮವು ಈ ಪ್ರೊಗ್ರೆದಲ್ಲಿ ಈಗ ಪ್ರತ್ಯೇಕ ತಡೆರಹಿತ ಸೌಕರ್ಯವನ್ನು ಒದಗಿಸಿಲ್ಲ. ಹಿಂದೆ ಮಂಗಳೂರು-ಪುತ್ತೂರು ನಡುವೆ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದ್ದ ತಡೆರಹಿತ ಸಾರಿಗೆಗಳನ್ನು ಸಾರ್ವಜನಿಕ ಒತ್ತಾಯಕ್ಕೆ ಮಣಿದು ಅತೀ ವೇಗದ ಸಾರಿಗೆಗಳನ್ನಾಗಿ ಪರಿವರ್ತಿಸಲಾಗಿದೆ. ಕಲ್ಲಡ್ಕ ಗ್ರಾಮಸ್ಥರ ಅನುಕೂಲಕ್ಕಾಗಿ ಇಂತಹ ೭ ಅತೀ ವೇಗದ ಸಾರಿಗೆಗಳಿಗೆ ಕಲ್ಲಡ್ಕ ಗ್ರಾಮದಲ್ಲಿ ಕೂಡಲೇ ನಿಲುಗಡೆ ನೀಡಲು ಕ್ರಮ ಕೈಗೊಳ್ಳಲಾಗುವುದು. ಮುಂಬರುವ ತೀರಿದ ನಂತರ ಇನ್ನೂ ಹೆಚ್ಚಿನ ವೇಗಧೂತ ಸಾರಿಗೆಗಳನ್ನು ಕಲ್ಲಡ್ಕದಲ್ಲಿ ಕೋರಿಕೆ ನಿಲುಗಡೆ ನೀಡುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕುಮಟಾ ತಾಲ್ಲೂಕಿನ ವಳ್ಳಿ ಗ್ರಾಮದ ಬಳಿ ನೀರು ಪಾಲಾದ ತಾಯಿ ಮತ್ತು ಮಗುವಿನ ಕಡೆಯವರಿಗೆ ಪರಿಹಾರಧನ ಒದಗಿಸುವುದು

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಕುಮಟಾ ತಾಲ್ಲೂಕಿನ ವಳ್ಳಿ ಎಂಬ ಗ್ರಾಮದ ಬಳಿ ಆಕಳ ಕರುವೊಂದು ಹಳ್ಳದಲ್ಲಿ ತೇಲಿ ಹೋಗುತ್ತಿದ್ದುದನ್ನು ಉಳಿಸಲು ಹಳ್ಳಕ್ಕಿಳಿದ ತಾಯಿ ಹಾಗೂ ಮಗು ಇಬ್ಬರೂ ನೀರಿನ ಪಾಲಾಗಿದ್ದಾರೆ. ಶರಾವತಿ ನದಿಗೆ ಸೇರುವ ಹಳ್ಳದಲ್ಲಿ